# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ: 175(236)

ಮಾನ್ಯ ಸದಸ್ಯರ ಹೆಸರು: ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ: 06/03/2025

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಯವರು

--------

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ ಸಹಾಯಕ ವೃಂದದಿಂದ ಹಿರಿಯ ಸಹಾಯಕ ವೃಂದಕ್ಕೆ ಮುಂಬಡ್ತಿ ನೀಡುವಲ್ಲಿ ಅನ್ಯಾಯವಾಗಿರುವುದಾಗಿ ಯಾರು ಯಾರು ಮನವಿ ಸಲ್ಲಿಸಿರುತ್ತಾರೆ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ (ಸಂಪೂರ್ಣ ವಿವರ ಒದಗಿಸುವುದು) | ಕರ್ನಾಟಕ ಸರ್ಕಾರ ಸಚಿವಾಲಯದ ಅಂಕಿತ ಮೂಲ ವೃಂದದ ಸಹಾಯಕರಾದ ಶ್ರೀ ಚಂದ್ರಶೇಖರ ಲಿಂಗಗಿರಿ, ಶ್ರೀ ಪ್ರಕಾಶ ಎನ್, ಶ್ರೀ ಕಿರಣಕುಮಾರ್ ಎ ಮತ್ತು ಶ್ರೀಮತಿ ರಾಜೇಶ್ವರಿ ಜಿ.ಸಿ. ಇವರುಗಳು ಮುಂಬಡ್ತಿ ನೀಡುವ ಕುರಿತು ಮನವಿ ಸಲ್ಲಿಸಿರುತ್ತಾರೆ.<br><br>ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದ ದಿನಾಂಕ: 01.08.2023 (ತಿದ್ದುಪಡಿ ಆದೇಶ ದಿನಾಂಕ: 26.10.2023) ತೀರ್ಪಿನನ್ವಯ ಹಾಗೂ ಸಚಿವ ಸಂಪುಟ ಉಪಸಮಿತಿಯ ನಿರ್ಣಯದನ್ವಯ ದಿನಾಂಕ:22.07.2024, ಸಂಖ್ಯೆ: ಸಿಆಸುಇ 145 ಅಸಸೇ 2024ರಲ್ಲಿ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಸಹಾಯಕ ವೃಂದದ ನೌಕರರ ಅರ್ಹತಾ ದಿನಾಂಕವನ್ನು ದಿನಾಂಕ: 21.04.2014ರಿಂದ ಜಾರಿಗೆ ಬರುವಂತೆ ನಿಗದಿಪಡಿಸಿ ಜೇಷ್ಠತೆಯನ್ನು ಮರುಹೊಂದಾಣಿಕೆ ಮಾಡಿ ಆದೇಶಿಸಲಾಗಿದೆ. ಅದರಂತೆ ಸಂಬಂಧಪಟ್ಟ ನೌಕರರ ಜೇಷ್ಠತೆಯನ್ನು ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಲು ಪರಿಶೀಲಿಸಲಾಗುತ್ತಿದೆ. |
| (ಆ) | ಈ ಬಗ್ಗೆ ಕಾನೂನು ಇಲಾಖೆಯು ಮುಂಬಡ್ತಿ ನೀಡುವಂತೆ ಸಲಹೆ ನೀಡಿದ್ದರೂ ಅದನ್ನು ಜಾರಿಗೊಳಿಸದೆ ಅಸಡ್ಡೆ ತೋರುತ್ತಿರುವ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ಒದಗಿಸುವುದು) | ಕಾನೂನು ಇಲಾಖೆಯು ಮುಂಬಡ್ತಿ ನೀಡುವಂತೆ ಸಲಹೆ ನೀಡಿರುವುದಿಲ್ಲ. ಬದಲಾಗಿ, ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದ ಆದೇಶದನ್ವಯ ದಿನಾಂಕ 22.07.2024 ರಂದು ಹೊರಡಿಸಲಾದ ಆದೇಶವು ಸಮಂಜಸವಾಗಿರುವುದಾಗಿ ಅಭಿಪ್ರಾಯ ನೀಡಿರುತ್ತದೆ. ಹೀಗಾಗಿ ಯಾರ ವಿರುದ್ಧವೂ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |
| (ಇ) | ಜೇಷ್ಠತೆಯಲ್ಲಿ ಅರ್ಹತೆ ಹೊಂದಿರುವ ಸಹಾಯಕರುಗಳಿಗೆ ಅನ್ಯಾಯವಾಗಿರುವುದರ ಬಗ್ಗೆ ಕ್ರಮ ಕೈಗೊಂಡು ತಕ್ಷಣದಿಂದ ಜಾರಿಗೆ ಬರುವಂತೆ ಹಿರಿಯ ಸಹಾಯಕ ವೃಂದಕ್ಕೆ ಮುಂಬಡ್ತಿ ನೀಡಿ ಆದೇಶ ಹೊರಡಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು; | ದಿನಾಂಕ 22.07-2024ರ ಆದೇಶದನ್ವಯ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಪರಿಶೀಲಿಸಲಾಗುತ್ತಿದೆ. |
| (ಈ) | ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಆದೇಶ ಹೊರಡಿಸಲಾಗುವುದು? (ಸಂಪೂರ್ಣ ವಿವರ ಒದಗಿಸುವುದು) | ಜೇಷ್ಠತಾ ಪಟ್ಟಿ ಪರಿಶೀಲಿಸಿ ಅಂತಿಮಗೊಳಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಸಿಆಸುಇ 40 ಎಮ್‌ಎ 2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ



: No. DPAR/40/ASA/2025-DPAR_ADMIN_SEC_B-DPAR (Computer No. 1697077)
nerated from eOffice by MANJUNATH S, DPAR-SO(MAS), SECTION OFFICER, DEPARTMENT OF PERSONNEL ...